ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಬಂದಿದೆ.

ಆ) ಬಸ್ ಸಂಚಾರಕ್ಕೆ ಯೋಗ್ಯವಾದ ರಸ್ತೆ ನಿರ್ಮಾಣವಾದ ಕೂಡಲೇ ಸಾರಿಗೆ ಸೌಲಭ್ಯ ಒದಗಿಸಲಾಗುವುದು.

622(791) : ಶ್ರೀ ರಮೇಶ್‌ಕುಮಾರ್ ಕೆ.ಆರ್. (ಶ್ರೀನಿವಾಸಪುರ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಬೃಹತ್ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು ಮತ್ತು ಅವುಗಳ ಹೆಸರುಗಳೇನು;

ಆ) ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಮಧ್ಯಮ ನೀರಾವರಿ ಯೋಜನೆಗಳು ಎಷ್ಟು ಮತ್ತು ಅವುಗಳ ಹೆಸರುಗಳೇನು;

ಇ) ಸರ್ಕಾರ ಈವರೆವಿಗೂ ಈ ಯೋಜನೆಗಳಿಗಾಗಿ ಖರ್ಚು ಮಾಡಿರುವ ಒಟ್ಟು ಹಣವೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಮೇಲಿನಂತೆ.

623(832) : ಶ್ರೀ ರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ನಾಲೆ ಕಾಮಗಾರಿಗಳು ನೆನೆಗುದಿಗೆ ಬಿದ್ದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಇದಕ್ಕಾಗಿ ಮಂಜೂರಾಗಿರುವ ಹಣ ಎಷ್ಟು;

ಈ) ಖರ್ಚು ಮಾಡಿರುವ ಮೊತ್ತವೆಷ್ಟು;

ಉ) ಈ ಕಾಮಗಾರಿಗಳನ್ನು ಮುಗಿಸಲು ಕಾಲಮಿತಿಯನ್ನು ನಿಗದಿಗೊಳಿಸಲಾಗಿದೆಯೇ; ಯಾವಾಗ ಮುಗಿಸಲಾಗುವುದು; (ವಿವರ ಒದಗಿಸುವುದು);

ಊ) ತುಂಗಾ ಮತ್ತು ಭದ್ರಾ ಎಡನಾಲೆಗಳ ದುರಸ್ಥಿ ನೆನೆಗುದಿಗೆ ಬಿದ್ದಿದ್ದು ಕೆಳಹಂತದ ರೈತರಿಗೆ ಸರಿಯಾಗಿ ನೀರು ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಬಂದಿದ್ದಲ್ಲಿ ಸದರಿ ನಾಲೆಗಳ ದುರಸ್ಥಿಗೆ ಯಾವ ಕ್ರಮವನ್ನು ಸರ್ಕಾರ ಕೈಗೊಂಡಿದೆ ಹಾಗೂ ಇದಕ್ಕಾಗಿ ನೀಡುವ ಹಣ ಎಷ್ಟು (ವಿವರ ಒದಗಿಸುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) ಅ) ಯೋಜನೆಯ ಮುಖ್ಯ ಕಾಲುವೆ ಕಾಮಗಾರಿಗಳನ್ನು ಕಿಮೀ 174 ರವರೆಗೆ ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ ಕಿಮೀ 1 ಮತ್ತು 2ರಲ್ಲಿ ಕೇಂದ್ರ ಸರ್ಕಾರದ ಅರಣ್ಯ ಇಲಾಖೆಯ ಅಂತಿಮ ಪರವಾನಿಗೆ ನಿರೀಕ್ಷಿಸುತ್ತಿದ್ದು, ದೊರೆತ ಕೂಡಲೇ ಪ್ರಾರಂಭಿಸಲಾಗುವುದು. ಕಿಮೀ 11 ರಿಂದ 35 ರವರೆಗಿನ ಕಾಲುವೆ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರು ಕೆಲವು ಐಟಂಗಳ ದರದ ವಿಚಾರದಲ್ಲಿ ನಿಗಮದ ಕ್ರಮವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಮೂಲಕ ಸದರಿ ದರಗಳ ಅನುಷ್ಠಾನಕ್ಕೆ ತಡೆಯಾಜ್ಞೆಯನ್ನು ತಂದಿರುತ್ತಾರೆ. ಈ ವಿಷಯವು ನ್ಯಾಯಾಲಯದಲ್ಲಿ ಇತ್ಯರ್ಥವಾಗಬೇಕಾಗಿದ್ದು, ಕಾಲುವೆಯ ಈ ಭಾಗದಲ್ಲಿ ಕಾಮಗಾರಿಯ ಪ್ರಗತಿ ಕುಂಠಿತಗೊಂಡಿರುತ್ತದೆ.

ಆ) ನ್ಯಾಯಾಲಯವು ಪ್ರಕರಣವನ್ನು ತ್ವರಿತವಾಗಿ ವಿಚಾರಣೆ ತೆಗೆದುಕೊಳ್ಳಬೇಕೆಂದು ನಿಗಮವು ಅರ್ಜಿ ದಾಖಲಿಸಿದ್ದು, ಪ್ರಕರಣದ ವಿಚಾರಣೆಯು ಈಗಾಗಲೇ ಭಾಗಶಃ, ಮುಗಿದಿದ್ದು, ಅಂತಿಮ ವಿಚಾರಣೆ ಸದ್ಯದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಇ) ಪರಿಷ್ಕರಿಸಲಾದ ಯೋಜನಾ ಅಂದಾಜು ಮೊತ್ತ ರೂ.1052.33 ಕೋಟಿ. 2004–05ನೇ ಸಾಲಿಗೆ ರೂ. 92.00 ಕೋಟಿ ಅನುದಾನವನ್ನು ನಿಗದಿಗೊಳಿಸಿದೆ.

ಈ) ತುಂಗಾ ಮೇಲ್ದಂಡೆ ಯೋಜನೆಗಾಗಿ ಯೋಜನೆಯ ಪ್ರಾರಂಭದಿಂದ ಜೂನ್ 2004ರ ಅಂತ್ಯಕ್ಕೆ ಖರ್ಚು ಮಾಡಲಾದ ಒಟ್ಟು ಮೊತ್ತ ರೂ.368.25 ಕೋಟಿಗಳು.

ಉ) ತುಂಗಾ ಮೇಲ್ದಂಡೆ ಯೋಜನೆಯ ಕಾಮಗಾರಿಯನ್ನು 2006–07ನೇ ಸಾಲಿನ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಊ) ಬಂದಿರುತ್ತದೆ.

ಋ) ಸದರಿ ನಾಲೆಗಳ ದುರಸ್ಥಿಯನ್ನು ತುಂಗಾ ಹಾಗೂ ಭದ್ರಾ ನಾಲೆಗಳ ಆಧುನೀಕರಣ ಯೋಜನೆಯಡಿಯಲ್ಲಿ ಕರ್ನಾಟಕ ನೀರಾವರಿ ನಿಗಮ ನಿಯಮಿತ ವತಿಯಿಂದ ಕೈಗೊಳ್ಳಲು ಉದ್ದೇಶಿಸಲಾಗಿದೆ.

ತುಂಗಾ ನಾಲೆಗಳ ಆಧುನೀಕರಣಕ್ಕಾಗಿ ರೂ.66.85 ಕೋಟಿ ಹಾಗೂ ಭದ್ರಾ ನಾಲೆಗಳ ಆಧುನೀಕರಣಕ್ಕಾಗಿ ರೂ.365.00 ಕೋಟಿ ಮೊತ್ತಗಳ ಪ್ರಸ್ತಾವನೆ ಇರುತ್ತದೆ. ಇವುಗಳಲ್ಲಿ ತುಂಗಾ ಎಡದಂಡೆ ನಾಲೆಗೆ ರೂ.34.80 ಕೋಟಿ ಹಾಗೂ ಭದ್ರಾ ಎಡದಂಡೆ ನಾಲೆಗೆ ರೂ. 27.75 ಕೋಟಿಗಳಾಗುತ್ತದೆ.

624(833) : ಶ್ರೀ ರೇಣುಕಾಚಾರ್ಯ, ಎಂ.ಪಿ. (ಹೊನ್ನಾಳಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕಿನ ಸವಳಂಗ ಕೆರೆಗೆ ತುಂಗಾ ಏತ ನೀರಾವರಿ ಮೂಲಕ ನೀರನ್ನು ಒದಗಿಸುವ ವಿಚಾರ ಸರಕಾರಕ್ಕೆ ಇದೆಯೇ;